೧೫. ಸರ್ಕಾರಕ್ಕೆ ನಿವೃತ್ತಿ ವೇತನದ ಬಾಬ್ತು ಮಂತಿಗೆ ಬಾಕಿ

ಅ) ೧-೪-೧೯೮೫ ರಿಂದ ೩೧-೩-೧೯೮೬ ರವರೆಗೆ ಸರ್ಕಾರಕ್ಕೆ ಪಾವತಿ ಮಾಡಿರುವ ಮೊಬಲಗು

ಆ) ೧-೪-೧೯೮೫ಕ್ಕೆ ಪಾವತಿ ಮಾಡಬೇಕಾದ ಬಾಕಿ

೧೬. ಸರ್ಕಾರಕ್ಕೆ ಪಾವತಿ ಮಾಡಬೇಕಾಗಿರುವ ತನಿಖಾ ವೆಚ್ಚ

ಅ) ೧-೪-೧೯೮೫ ರಿಂದ ೩೧-೩-೧೯೮೬ರ ವರೆಗೆ ಸರ್ಕಾರಕ್ಕೆ ಪಾವತಿ ಮಾಡಿರುವ ಮೊಬಲಗು

ಆ) ೧-೪-೧೯೮೬ಕ್ಕೆ ಬಾಕಿ ನಿಂತಿರುವ ಪಾವತಿ ಮಾಡಬೇಕಾದ ಮೊಬಲಗು

೧೭. ಕುಟುಂಬ ಕಲ್ಯಾಣ ನಿಧಿಗೆ ಪಾವತಿ ಮಾಡಬೇಕಾದ ಬಾಕಿ

ಅ) ದಿನಾಂಕ ೧-೪-೧೯೮೫ ರಿಂದ ೩೧-೩-೧೯೮೬ ರವರೆಗೆ ಪಾವತಿ ಮಾಡಿರುವ ಮೊಬಲಗು

ಆ) ೧-೪-೧೯೮೬ಕ್ಕೆ ಪಾವತಿ ಮಾಡಬೇಕಾಗಿರುವ ಬಾಕಿ

೧೮. ಸರ್ಕಾರಕ್ಕೆ ಪಾವತಿ ಮಾಡಬೇಕಾದ ವೈದ್ಯಕೀಯ ಮಂತಿಗೆ

ಅ) ೧-೪-೧೯೮೫ ರಿಂದ ೩೧-೩-೧೯೮೬ ರವರೆಗೆ ಪಾವತಿ ಮಾಡಿರುವ ಮೊಬಲಗು

ಆ) ೧-೪-೧೯೮೬ಕ್ಕೆ ಪಾವತಿ ಮಾಡಬೇಕಾಗಿರುವ ಬಾಕಿ

ಧೃಡೀಕರಣ

ಮೇಲೆ ನಮೂದಿಸಿರುವ ಎಲ್ಲಾ ಅಂಶಗಳೂ ಸರಿಯಾಗಿರುತ್ತವೆ ಎಂದು ನಾನು ಧೃಢೀಕರಿಸುತ್ತೇನೆ

ಚುಕ್ಕಿ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು.

ಅಧ್ಯಕ್ಷರು.—ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳ ಪಟ್ಟಿಯಂನ್ನು ಮಂಂಡಿಸುವುದಂ.

ಶ್ರೀ ಎ. ಲಕ್ಷ್ಮೀಸಾಗರ್,—ಅಧ್ಯಕ್ಷರೆ, ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳ ಪಟ್ಟಿಯಂನ್ನು ಸಭೆಯಂ ಮುಂಂದಿಡುತ್ತೇನೆ.

ಅಧ್ಯಕ್ಷರು.—ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳ ಪಟ್ಟಿಯನ್ನು ಸಭೆಯು ಮಂಂದಿಡಲಾಗಿದೆ.

ಮಂಗಳೂರು ಮಹಾ ನಗರದ ನೀರು ಸರಬರಾಜಿನ ಬಗ್ಗೆ.

೧೮೨೩. ಶ್ರೀ ಎನ್. ಎಂ. ಅಡ್ಯಂತಾಯ (ಸುರತ್ಕಲ್).—ಮಾನ್ಯ ನಗರಾಭಿವೃದ್ಧಿ ಮಂತ್ರಿಗಳ ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಮಂಗಳೂರು ನಗರದಲ್ಲಿ ಪ್ರಸ್ತುತ ಜನರಿಗೆ ಒದಗಿಸುತ್ತಿರುವ ಕುಡಿಯುವ ನೀರಿನ ಪ್ರಮಾಣವೆಷ್ಟು (ಒಟ್ಟು ಜನಸಂಖ್ಯೆ ಹಾಗೂ ನೀರಿನ ಪ್ರಮಾಣದ ಪ್ರತ್ಯೇಕ ವಿವರಗಳನ್ನು ನೀಡುವುದು ?

ಆ) ಈ ಕುಡಿಯುಂದ ನೀರಿನ ತೊಂದರೆ ಕಡಿಮೆ ಮಾಡಲು ಸರ್ಕಾರದವರು ಉದ್ದೇಶಿಸಿರುವ ಶಾಶ್ವತ ಪರಿಹಾರದ ಕಾರ್ಯ ಕ್ರಮವೇನು, ಹಾಗೂ ಇದಕ್ಕೆ ಬೇಕಾದ ಹಣದ ಪ್ರಮಾಣವೆಷ್ಟು ?

ಇ) ಈ ದಿಸೆಯಲ್ಲಿ ಈವರೆಗೆ ಸಾಧಿಸಿದ ಪ್ರಗತಿಯೇನು ?

ಶ್ರೀ ಎಂ. ಚಂದ್ರಶೇಖರ್ (ನಗರಾಭಿವೃದ್ಧಿ ಸಚಿವರು).—

ಅ) ಜನಸಂಖ್ಯೆ ೩.೫೦ ಲಕ್ಷ ತಲಾ ದಿನಂಪ್ರತಿ ೨೪ ಗ್ಯಾಲನ್‌ಗಳು (೧೦೫ ಲೀಟರ್‌ಗಳು)